ಕೂಡ ಮಾಡುತ್ತೇನೆ. ಬೆಂಗಳೂರಿಗೊಂದು ಕಾನೂನು, ಮಂಗಳೂರಿಗೊಂದು ಕಾನೂನು ತಂದರೆ ಖಂಡಿತವಾಗಿಯು ನಡೆಯುವುದಿಲ್ಲವೆಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಯಾವ ಕಾರಣಕ್ಕೋಸ್ಕರ ಬೆಂಗಳೂರಿಗೆ ವಿಶೇಷ ಸೌಲಭ್ಯ ಕೊಡುತ್ತಿದ್ದೀರಿ? ಮಂಗಳೂರಿಗೆ ಏಕೆ ಈ ಸೌಲಭ್ಯ ಇಲ್ಲ? ಇನ್ನಿತರ ಪುರಸಭೆಗಳಿಗೆ ಏಕಿಲ್ಲ? ಇಂತಹ ತಾರತಮ್ಯ ನೀತಿಯನ್ನು ತಾವೇಕೆ ತರುತ್ತಿದ್ದೀರಿ? ಇದನ್ನು ನಾನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಖಂಡಿಸುವ ಮೂಲಕ ನನ್ನ ಅನಿಸಿಕೆಗಳನ್ನು ವ್ಯಕ್ತಪಡಿಸಿ ಇದನ್ನು ಪರಾಮರ್ಶೆಗಾಗಿ ಜಂಟಿ ಸದನ ಸಮಿತಿಗೆ ಒಪ್ಪಿಸಬೇಕೆಂದು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ.

4. ಕರ್ನಾಟಕದ ಮಧ್ಯಮಾವಧಿ ಆರ್ಥಿಕ ಯೋಜನೆ 2003-2004 ರಿಂದ 2006-2007ನ್ನು ಸದನದ ಮುಂದೆ ಮಂಡಿಸುವುದು

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ) : ಮಾನ್ಯ ಚೇರ್ಮನ್‌ರವರೆ, ನಿನ್ನೆ ನಾನು ಸದನಕ್ಕೆ ಆಶ್ವಾಸನೆ ಕೊಟ್ಟಂತೆ ಇವೊತ್ತು ಕರ್ನಾಟಕ ಮಧ್ಯಮಾವಧಿ ಆರ್ಥಿಕ ಯೋಜನೆ 2003-04 ರಿಂದ 2006-07 ಅನ್ನು ಸದನದ ಮುಂದೆ ಮಂಡಿಸಲು ತಮ್ಮ ಅಪ್ಪಣೆ ಬೇಡುತ್ತೇನೆ.

5. ಚೇರ್ಮನ್ : ಮಂಡಿಸಲಾಯಿತು

5. ಶಾಸನ ರಚನೆ

(1) ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕ 2003 (ಮುಂದು)

† ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಚೇರ್ಮನ್‌ರವರೆ, 2003ರ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕದ ಬಗ್ಗೆ ಸುಮಾರು ಎರಡು ಗಂಟೆಗಳ ಕಾಲ ಮಾನ್ಯ ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್, ಬಿ. ಸೋಮಶೇಖರ್, ಎ. ರಾಮದಾಸ್, ಕೆ. ಜಯಪ್ರಕಾಶ್ ಹೆಗ್ಡೆ, ವಿಶ್ವೇಶ್ವರ ಹೆಗಡೆ ಕಾಗೇರಿ, ಮತ್ತು ಎನ್. ಯೋಗೀಶ್ ಭಟ್‌ರವರು ಮಾತನಾಡಿ ಅನೇಕ ವಿಚಾರ, ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಮೂಲಕ ಕೆಲವು ವಿಚಾರಗಳ ಮೇಲೆ ಬೆಳಕನ್ನೂ ಕೂಡ ಚೆಲ್ಲಿದ್ದಾರೆ.

12.50 ಪಿಎಂ

ಕೆಲವು ಸಂದರ್ಭದಲ್ಲಿ ಅಭಿನಂದನೆಯನ್ನೂ ಸಲ್ಲಿಸಿದ್ದಾರೆ. ಕೆಲವು ಕಡೆ ವಿರೋಧ ಕೂಡ ಮಾಡುತ್ತೇವೆಂದು ಪ್ರಸ್ತಾಪ ಸಹ ಮಾಡಿದ್ದಾರೆ. ಮುಖ್ಯಮಂತ್ರಿಗಳು ಎಲ್ಲಿಯವರೆಗೆ ಈ ಸದನದಲ್ಲಿ ಇರಲಿಲ್ಲ. ಅಲ್ಲಿಯವರೆಗೆ ಎಲ್ಲಾ ಚೆನ್ನಾಗಿ ಮಾಡಿದ್ದೀರಿ, ಅಭಿನಂದನೆಗಳು, ಸ್ವಾಗತಾರ್ಹವೆಂದು ಹೇಳುತ್ತಿದ್ದಿರಿ. ಮುಖ್ಯಮಂತ್ರಿಗಳು ಬಂದ ತಕ್ಷಣ, ಉತ್ತರ ಕನ್ನಡ ಶಾಸಕರು, ಇಲ್ಲಾ ನಾವು ಇದನ್ನು ವಿರೋಧ ಮಾಡುತ್ತೇವೆ. ಜಂಟಿ ಸದನದ ಸಮಿತಿಗೆ ರೆಫರ್ ಮಾಡಿ ಎಂದು ಹೇಳುತ್ತಿದ್ದಾರೆ. ರಾಮದಾಸ್ ರವರ ಭಾಷಣವನ್ನು ನಾನು ನೋಡುತ್ತಿದ್ದಾಗ.., ನಾನು ಈ ಕಾರ್ಪೊರೇಷನ್ ಇಲಾಖೆ ಬಂದ ತಕ್ಷಣ ನಗರಗಳ ಚರಿತ್ರೆಗಳಿಗೆ ಬಂದೆ. ನಗರಗಳ ಚರಿತ್ರೆ ಎಲ್ಲಿದೆ ಎಂದು ನಾನು ಬಂದೆ. ಏಕೆಂದರೆ ನಾನು ಹಳ್ಳಿಯಿಂದ ಬಂದವನು. ಈ ಇಲಾಖೆಯನ್ನು ಮುಖ್ಯಮಂತ್ರಿಗಳು ಕೊಟ್ಟಮೇಲೆ, ಈ ಇಲಾಖೆಯ ಬಗ್ಗೆ ಅಭ್ಯಾಸ ಮಾಡಿ ನೋಡಿದಾಗ, ಇಲ್ಲಿ ಎಂತೆಂಥ ಪಂಡಿತರು, ಬುದ್ದಿವಂತರು, ರಾಷ್ಟ್ರದ ನಾಯಕರು, ಜವಹರಲಾಲ್‌ನೆಹರೂರಂಥವರು, ಡಾ: ರಾಧಾಕೃಷ್ಣನ್‌ಅಂತವರು, ನೇತಾಜಿ ಬೋಸ್‌ರಂತವರು, ರಾಜಾಜಿಯವರು, ಕೆಂಗಲ್ ಹನುಮಂತಯ್ಯನವರು, ವಲ್ಲಬಾಯಿ

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)